ದಿಃ 10.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ 10ನೇ ಆರೋಪಿಗಳ ಪರವಾಗಿ ಶ್ರೀ.ಡಿ.ಎಸ್.ಎಂ., ವಕೀಲರಿಂದಃ</u>**

ವೈದ್ಯಕೀಯ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತಹ ಬೇರೆ ಪ್ರಕರಣಗಳಲ್ಲಿ ನಾನು ಇದುವರೆಗೆ ತನಿಕೆ ಮಾಡಿರುವುದಿಲ್ಲ. ವೈದ್ಯಕೀಯ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತಹ ಪ್ರಕರಣದ ತನಿಖೆ ಈ ಪ್ರಕರಣದಲ್ಲಿ ಪ್ರಥಮವಾಗಿರುತ್ತದೆ.

ಪ್ರಶ್ನೆ 1ಃ ನೀವು ಈ ಪ್ರಕರಣದಲ್ಲಿ ಆರೋಪಿಸಿರುವಂತಹ ಶಸ್ತ್ರ ಚಿಕಿತ್ಸೆಯನ್ನು ತನಗೆ ಯಾವ ವೈದ್ಯರು ಮಾಡಿರುತ್ತಾರೆ ಎಂದು ಪಿರ್ಯಾದುದಾರ ತನ್ನ ದೂರಿನಲ್ಲಿ ಆರೋಪಿಸುತ್ತಾರೆಯೇ ?

ಉತ್ತರಃ ದೂರಿನಲ್ಲಿ ಹೇಳಿರುವುದಿಲ್ಲ. ಆದರೆ ಮುಂದುವರಿದ ಹೇಳಿಕೆಯಲ್ಲಿ ಹೇಳಿರುತ್ತಾರೆ.

ಪಿರ್ಯಾದುದಾರ ತನ್ನ ಮುಂದುವರಿದ ಹೇಳಿಕೆಯಲ್ಲಿ ತನಗೆ ಇಂತಹದ್ದೇ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ ಎಂದು ಎಲ್ಲಿಯೂ ಹೇಳಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರ ತನ್ನ ಹೇಳಿಕೆಯಲ್ಲಿ ಅಥವಾ ಮುಂದುವರಿದ ಹೇಳಿಕೆಯಲ್ಲಿ 10ನೇ ಆರೋಪಿಯೇ ತನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಮುಂದುವರಿದ ಹೇಳಿಕೆಯಲ್ಲಿ ಹೇಳಿರುತ್ತಾರೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಗಂಗದಾಸಪ್ಪ ಯಾವುದೇ ಮುಂದುವರಿದ ಹೇಳಿಕೆಯನ್ನು ಕೊಟ್ಟಿರುವುದಿಲ್ಲ, ಅದನ್ನು ನಾನೇ ಸೃಷ್ಟನೆ ಮಾಡಿರುತ್ತೇನೆ ಎಂದು ಆತ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸರಿಯಲ್ಲ. ಗಂಗದಾಸಪ್ಪ ನ್ಯಾಯಾಲಯದ ಮುಂದೆ ತನ್ನ ಸಾಕ್ಷ್ಯ ವಿಚಾರಣೆಯಲ್ಲಿ "ಯಾರೂ ನನಗೆ ನನ್ನ ಮರ್ಮಾಂಗದ ಬೀಜಗಳನ್ನು ತೆಗೆದರು ಎಂದು

ಇಲ್ಲಿಯವರೆಗೂ ತಿಳಿದಿಲ್ಲ. ದೂರಿನ ನಂತರವೂ ನಾನು ಪೊಲೀಸರ ಮುಂದೆ ಹೆಚ್ಚುವರಿ ಹೇಳಿಕೆ ನೀಡಿಲ್ಲ." ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 10ನೇ ಆರೋಪಿಯ ಹೆಸರನ್ನು ಈ ಪ್ರಕರಣದಲ್ಲಿ ಪೊಲೀಸರೇ ಸೇರಿಸಿರುತ್ತಾರೆ ಎಂದೂ ಕೂಡ ಆತ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿರುವಂತಹ ಕೇಸ್ ಶೀಟ್‌ನಲ್ಲಿ 10ನೇ ಆರೋಪಿಗೆ ಸಂಬಂಧಿಸಿದಲ್ಲ ಹಾಗು ಅದರಲ್ಲಿರುವಂತಹ ಸಹಿ ಆತನದ್ದಲ್ಲ ಎಂದರೆ ಸಾಕ್ಷಿ ದೋಷಾರೋಪಣಾ ಪಟ್ಟಿ ನಾನು ಸಲ್ಲಿಸಿರುವುದಿಲ್ಲ, ಆದರೆ ಕೇಸ್ ಶೀಟ್‌ನ್ನು ನಾನೇ ವಶಪಡಿಸಿಕೊಂಡು ಮಾಲು ಪಟ್ಟಿ ಸಂಖ್ಯೆಯಲ್ಲಿ ಅಳವಡಿಸಿಕೊಂಡು ಹೆಚ್ಚಿನ ತನಿಖೆಗಾಗಿ ಅದನ್ನು ಡಿವೈಎಸ್‌ಪಿ ರವರಿಗೆ ನೀಡಿರುತ್ತೇನೆ. 10ನೇ ಆರೋಪಿಯ ಆಸ್ಪತ್ರೆಗೆ ಸಂಬಂಧಿಸಿದ ಆರೋಪಿಸಿರುವಂತಹ ಕೃತ್ಯದ ದಿನಾಂಕಕ್ಕೆ ಸಂಬಂಧಿಸಿದ ಓಟಿ ರಿಜಿಸ್ಟರ್ ನ್ನು ವಶಪಡಿಸಿಕೊಳ್ಳಲಾಗಿದೆ. ಅದು ಕಡತದಲ್ಲಿ ಇಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿರ್ಯಾದುದಾರನ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತಹ ಒಪ್ಪಿಗೆ ಪತ್ರವನ್ನು ದೋಷಾರೋಪಣಾ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದ ರೋಗಿಯ ಒಪ್ಪಿಗೆ ಪತ್ರವು ನಿರ್ದಿಷ್ಟವಾದ ನಮೂನೆಯಲ್ಲಿ ಇರುತ್ತದೆ ಎಂದರೆ ಸರಿ. ಕಡತದಲ್ಲಿ ಕಂಡುಬರುವಂತಹ ಪಿರ್ಯಾದುದಾರನ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದ ಒಪ್ಪಿಗೆ ಪತ್ರವು ನಿರ್ದಿಷ್ಟವಾದ ನಮೂನೆಯಲ್ಲಿ ಇರಲಿಲ್ಲ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ಒಪ್ಪಿಗೆದಾರರಾಗಿ ವಿರೂಪಾಕ್ಷ ಮತ್ತು ಗಾಯತ್ರಿ ಎಂಬುವವರ ಸಹಿಗಳಿವೆ ಎಂದರೆ ಸರಿ. ಇವರುಗಳಿಗೂ ಪಿರ್ಯಾದುದಾರನಿಗೂ ಏನೂ ಸಂಬಂಧ ಎಂದು ವಿಚಾರಣೆ ಮಾಡಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿ ಈಗಾಗಲೇ ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿಕೊಂಡಿದ್ದು, ಅದು 2ನೇ

ಆರೋಪಿ ಮೇಲೆ ಹೇಳಿದ ಹೆಸರುಗಳಲ್ಲಿ ಸಹಿ ಮಾಡಿರುತ್ತಾರೆ ಎಂದು ಈಗಾಗಲೇ ನಾನು ಸಾಕ್ಷ್ಯದಲ್ಲಿ ಹೇಳಿದ್ದೇನೆ ಎಂದು ಉತ್ತರಿಸಿರುತ್ತಾರೆ. ಸದರಿ ವಿರೂಪಾಕ್ಷ ಮತ್ತು ಗಾಯತ್ರಿ ರವರಿಗೂ ಪಿರ್ಯಾದುದಾರ ಗಂಗದಾಸಪ್ಪನಿಗೂ ಏನು ಸಂಬಂಧ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ಅದರಲ್ಲಿ ಕಂಡುಬರುವಂತಹ ವಿರೂಪಾಕ್ಷನ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಕರೆ ಮಾಡಿದ್ದು, ಅದು ಫೇಕ್ ನಂಬರ್ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಮೇಲೆ ಸೂಚಿಸಿರುವಂತಹ ಒಪ್ಪಿಗೆ ಪತ್ರ ವಾದ ನಿಶಾನೆ ಪಿ 24 ನಾನೇ ಸೃಷ್ಟಿ ಮಾಡಿರುವಂತಹ ದಾಖಲಾತಿ ಎಂದರೆ ಸರಿಯಲ್ಲ.

ನಿಶಾನೆ ಪಿ 22 ಈ ಪ್ರಕರಣಕ್ಕಾಗಿ ನಾನೇ ಸೃಷ್ಟಿ ಮಾಡಿಕೊಂಡ ದಾಖಲಾತಿ ಎಂದರೆ ಸರಿಯಲ್ಲ. ಮುದ್ದೆಮಾಲು 1 ರಿಂದ 5 ರಿಂದಲೇ ಕೃತ್ಯ ಎಸಗಲಾಗಿದೆ ಎಂಬುವುದನ್ನು ಖಾತರಿ ಪಡಿಸಿಕೊಳ್ಳಲು ಎಫ್.ಎಸ್.ಎಲ್.ನಿಂದ ಯಾವುದೇ ವರದಿ ತರಿಸಿಕೊಂಡಿಲ್ಲ. ಮುದ್ದೆಮಾಲು 1 ರಿಂದ 5 ರಂತಹ ವಸ್ತುಗಳು ಎಲ್ಲಾ ಮೆಡಿಕಲ್ ಸ್ಟೋರ್ ಗಳಲ್ಲಿ ಸಿಗುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸಿರುತ್ತಾರೆ. ಮುದ್ದೆಮಾಲು 1 ರಿಂದ 5 ನ್ನು ನಾನೇ ಸ್ವತಃ ಖರೀದಿ ಮಾಡಿ ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರಶ್ನೆ 2ಃ ಆರೋಪಿಸಿರುವ ಶಸ್ತ್ರ ಚಿಕಿತ್ಸೆಯ ದೃಶ್ಯಾವಳಿಯ ಸಿಸಿ ಕ್ಯಾಮೆರಾ, ಫೂಟೇಜ್, ಡಿವಿಆರ್ ನ್ನು ಅಮಾನತು ಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ?

ಉತ್ತರಃ ಸಿಸಿ ಟಿವಿ ಫೂಟೇಜ್‌ನ್ನು ಪೆನ್‌ಡ್ರೈವ್ ಗೆ ಡೌನ್‌ಲೋಡ್ ಮಾಡಿ ಅದನ್ನು ಹಾಜರುಪಡಿಸಲಾಗಿದೆ.

ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದನ್ನು 10ನೇ ಆರೋಪಿಯೇ ಪೆನ್ ಡ್ರೈವ್ ಗೆ ವರ್ಗಾಯಿಸಿ ಕೊಟ್ಟಿರುತ್ತಾರೆ. ಸಾಕ್ಷಿ ಸ್ವಯಂ ಹೇಳುತ್ತಾರೆ

ನಮ್ಮ ನಿವೇದನೆ ಮೇರೆಗೆ ಅದನ್ನು ನೀಡಲಾಗಿದೆ. 10ನೇ ಆರೋಪಿ ನನಗೆ ಯಾವುದೇ ಪೆನ್‌ಡ್ರೈವ್ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 10ನೇ ಆರೋಪಿ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ, ಖಾಲಿ ಹಾಳೆಯ ಮೇಲೆ ಆತನ ಸಹಿ ಪಡೆದು ನಂತರ ಅದನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರ ತನಗೆ ಬೈದು ಜಾತಿ ನಿಂದನೆ ಮಾಡಲಾಗಿದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 10ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.